Regd B G No. 155

— ೨೬ —

7—9—1962

Sri "SATYAVADI"
— DAILY —
MYSORE 4
47 th Year
೪೭ ನೇ ವರ್ಷ

ಸತ್ಯವಾದಿ

ಸ್ಥಾಪಕರು— ಅರಮನೆ ಸಿಂಹೇದಾರ್ ಎಂ. ಎ ಸುಬ್ಬರಾಯುರು 2 ನ ಪೈ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
"ಸತ್ಯವಾದಿ"ಯನ್ನು ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

Protect the cow
ಗೋಸಂರಕ್ಷಣೆ ಮಾಡಿ

ವಿಧಾನ ಸೌಧದ ಮುಂದೆ ಪ್ರದರ್ಶನ

ಬೆಂಗಳೂರು 6— ಕನ್ನಡ ಕ್ರಾಂತಿ ಕಾರಿ ಸಂಯುಕ್ತರಂಗವು— ಮೈಸೂರು ರಾಜ್ಯದ ಹೆಸರನ್ನು ಕರ್ನಾಟಕ ಎಂದು ಇಡಲೂ, ಕನ್ನಡವನ್ನು ರಾಜ್ಯದ ಅಧಿಕೃತ ಭಾಷೆಯಾಗಿ ಘೋಷಿಸಲು ಒತ್ತಾಯ ಮಾಡುವದಕ್ಕಾಗಿ ವಿಧಾನ ಸೌಧದ ಮುಂದೆ ನಾಳೆ ಪ್ರದರ್ಶನನಡೆಸಲು ಏರ್ಪಡಿಸಿದೆ

ಲೆಕ್ಚರರೇ ಇಲ್ಲವಾಗಿ

ಕೋಲಾರ 6— ಜುಲೈನಲ್ಲಿ ಕಾಲೇಜು ತೆರೆದಾರಭ್ಯ ಫಿಜಿಕ್ಸ್ ಮತ್ತು ಜೂಲಜಿಗೆ ಲೆಕ್ಚರರನ್ನು ಹಾಕಿಲ್ಲವಾಗಿ ಸ್ಥಳೀಯ ಫಸ್ಟ್ ಗ್ರೇಡು ಕಾಲೇಜಿನಿಂದ ಸುಮಾರು 114 ವಿದ್ಯಾರ್ಥಿಗಳು ತಂಗತಿಗಳಿಂದ ಹೊರಗೆ ಬಂದರು.

ಕಳ್ಳ ಪೋಲೀಸರರಿಗೆ ಶಕ್ಷೆ

ಬೆಂಗಳೂರು — ಇಬ್ಬರು ಸಶಸ್ತ್ರ ಪೋಲೀಸು ಕಾನಸ್ಟೆಬಲರಾದ ಗೋವಿಂದರಾಜು ಮತ್ತು ಗೋವಿಂದ ಎಂಬುವರು ಅಡುಗೋಡಿ ಪೋಲೀಸು ಕ್ವಾರ್ಟರ್‌ರುಗಳಲ್ಲಿ ರೂ. 500 ಕದ್ದ ಆಪಾದನೆಗಾಗಿ ತಲಾ ಮೂರು ತಿಂಗಳು ಕಠಿಣ ಸೆರೆ ವಿಧಿಸಲ್ಪಟ್ಟರು.

ಕರಾಳ ಪಟ್ಟಿಯಲ್ಲಿ

ನವದೆಹಲಿ 6— 59-60 ರಿಂದ ಈ ಆಗಸ್ಟ್ 31 ರವರಿಗೆ ರಫ್ತು-ಆಮದು ಲೈಸೆನ್ಸಿನ ಬಗ್ಗೆ ದುರ್ವರ್ತನೆ ನಡೆಸಿದ 184 ವ್ಯಾಪಾರಸಂಸ್ಥೆಗಳನ್ನು ಕರಾಳ ಪಟ್ಟಿಯಲ್ಲಿ ಸೇರಿಸಲಾಗಿದೆಯೆಂದು ರಾಜ್ಯ ಸಭೆಯಲ್ಲಿ ತಿಳಿಸಲಾಯಿತು.

×

ನಾಳೆಯ ಸಂಚಾರಿಗೆ

ಅಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞ ಶಿರೋಮಣಿ
ಸಂಪತ್ಕೃಷ್ಣ ಜೋಯಿಸರು
8 ಶನಿವಾರ ನವಮಿ ಮೂಲಾ

ಡಿ. ಎಂ. ಕೆ. ಎದುರಿಸಲು ಜಂಟಿ ಕಾರ್ಯಾರಂಗ

ಕೇಂದ್ರ ಕಚೇರಿಗಳಿಗೆ ಹತ್ತು ಅಂತಸ್ತಿನ ಕಟ್ಟಡ

ನವದೆಹಲಿ 6— ಕೇಂದ್ರ ಸರಕಾರದ ಕಚೇರಿಗಳಿಗೆ ಸ್ಥಳ ಮಾಡುವ ಉದ್ದೇಶದಿಂದ ಕಲ್ಕತ್ತಾದಲ್ಲಿ ಹತ್ತು ಅಂತಸ್ತಿನ ಭಾರಿ ಕಟ್ಟಡವೊಂದನ್ನು ಕಟ್ಟಲಾಗುವುದು ; ನೈಜಾಮರ ಅಂತಸ್ತಿನ ಕಾಂಪೌಂಡಿನಲ್ಲಿ 227000 ಚ. ಅಡಿಗಳಿಗೂ ಹೆಚ್ಚಿನ ವಿಸ್ತೀರ್ಣದಲ್ಲಿ ಕಟ್ಟಲಾಗುವ ಈ ಕಟ್ಟಡ ನಿರ್ಮಾಣಕ್ಕೆ 84 ಲಕ್ಷ ರೂಗಳಿಗೂ ಹೆಚ್ಚಿನ ವೆಚ್ಚಕ್ಕೆ ಕೇಂದ್ರ ಕಾ ಮಂತ್ರಿ ವಸತಿ ಮತ್ತು ಸಂಬರಾಜು ಶಾಖೆಯು ಮಂಜೂರಾತಿ ನೀಡಿದೆ.

ಉಪಾಧ್ಯಾಯರಿಗಾಗಿ ಧನ

ನವದೆಹಲಿ 6— 3 ನೇ ಯೋಜನೆಯ ಕಾಲದಲ್ಲಿ ಭಾರತದಲ್ಲಿನ ಉಪಾಧ್ಯಾಯರ ಸಂಬಳವನ್ನು ಹೆಚ್ಚಿಸಲು 130 ಕೋಟಿ ರೂಗಳನ್ನು ನಿರಕು ಮಾಡಲಾಗಿದೆಯೆಂದು ಪ್ಲಾನಿಂಗು ಕಮಿಷನ್ನಿನ ಸದಸ್ಯ ಶ್ರೀ ವಿ.ನ್.ಗಾಡ್ಗೀಳರು ಹೇಳಿದರು.

× ಬೆಂಗಳೂರು 6— ಪೋಸ್ಟಾಫೀಸು ಸೇವಿಂಗ್ಸು ಬ್ಯಾಂಕಿನ 80 ವರ್ಷದ ಸೇವೆಯ ಸಂಬಂಧದ ಉತ್ಸವವು ನವೆಂಬರಿನಲ್ಲಿ ನಡೆಸಲಾಗುವುದು.

ಕೈರ್ಯಾತ ಸಲಹೆ

ಚಂಡೀಘರ್ 6— ಪಂಜಾಬು, ಜಮ್ಮು ಮತ್ತು ಕಾಶ್ಮೀರ, ಹಿಮಾಚಲ ಪ್ರದೇಶ, ಡೆಲ್ಲಿ ಮತ್ತು ರಾಜಸ್ಥಾನಗಳು ಬಲಯುತವಾದ ಆಡಳಿತ ಯೂನಿಟ್ ಆಗಲು, ಒಟ್ಟುಕೂಡಬೇಕೆಂದು ಪಂಜಾಬು ಮುಖ್ಯ ಮಂತ್ರಿ ಶ್ರೀ ಕೈರಾಸ್ಸ ಸಲಹೆ ಮಾಡಿದರು ಇಂತಹ ರಾಜ್ಯ ಸ್ಥಾಪನೆಯು ಜನತೆಯನ್ನು ಒಟ್ಟುತರಿಸಿದರೆ ಬಹು ಭಾರಿ ಪ್ರಯೋಜನವಾಗಿದೆ ಹೆಚ್ಚುವಾಗಿನ ವಿರೋಧಾಭಾಸವನ್ನು ಕಾಣಬಹುದು.

ಪರ್ಯಾಲೋಚನೆಯಲ್ಲಿ

ನವದೆಹಲಿ 6— ದೇಶದ ಸುಸ್ಥಿತಿಗೆ ವಿರುದ್ಧವಾಗಿ ವರ್ತಿಸುತ್ತಿರುವ ಮತೀಯ ಸಂಸ್ಥೆಗಳ ವಿಷಯದಲ್ಲಿ ಏನು ಮಾಡಬೇಕೆಂಬುದನ್ನು ಸರಕಾರ ಪರ್ಯಾಲೋಚಿಸುತ್ತಿದೆಯೆಂದು ಗೃಹ ಮಂತ್ರಿ ಲಾಲ ಬಹದ್ದೂರು ಶಾಸ್ತ್ರಿಗಳು ಕಾಂಗ್ರೆಸ್ಸ ಪಾರ್ಟಿ ಸಭೆಯಲ್ಲಿ ತಿಳಿಸಿದರು — ಪ್ರತ್ಯೇಕಪಡಬೇಕೆಂಬ ವಿಶೇಷ ವದವರ ವಿಷಯ ಸರಕಾರದ ಪರ್ಯಾಲೋಚನೆಯಲ್ಲಿದೆ ಎಂದೂ ಹೇಳಿದರು — ಆಕ್ರಂದ ಕಾರ್ಯವು ಡಿ ಎಂ ಕೆ ಯನ್ನು ಬಲಪಡಿಸುವುದೆಂದು ಹೇಳಿದರು.

ಅರ್ಜಿ

ನವದೆಹಲಿ 6— ಸುಳವಾದ ಹಿಂದಿಯಲ್ಲಿ ಬರೆಯಲ್ಪಟ್ಟಿದ್ದ ಅಧ್ಯಕ್ಷ ಡಾ || ರಾಧಾಕೃಷ್ಣನ್ನರ ಜೀವಿತ ಚರಿತ್ರೆಯನ್ನು ಅದರ ಗ್ರಂಥಕರ್ತ ಲಕ್ಷ್ಮೀ ಪತ್ರಿಕೋದ್ಯಮಿ ಶ್ರೀ ರಮೇಶ ನಾರಾಯಣ ತಿವಾರಿ ಅವರಿಗೆ ಅರ್ಪಿಸಿದನು.

× ನವದೆಹಲಿ 6 — ಭಾರತದೊಂದಿಗೆ ಜಮ್ಮು ಕಾಶ್ಮೀರದ ಸೇರ್ಪಡೆಯು ಕ್ರಮಕ್ರಮವಾಗಿ ಆಗಿದೆ ಎಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ಹೊಡೆದಾಟದಲ್ಲಿ ಗಾಯ

ಅಹಮದಾಬಾದು 6— ರಾಂಚೋಡದುರ ಗಾನುದಲ್ಲಿ ಎರಡು ಗುಂಪಿನವರಿಗೆ ಹೊಡೆದಾಟವಾಗಿ 40 ಮಂದಿ ಗಾಯಗೊಂಡರು : ಹೊಡೆದಾಟದಲ್ಲಿ ಕತ್ತಿಗಳು ಉಪಯೋಗಿಸಲ್ಪಟ್ಟಿದ್ದವು.

ಮೆರವಣಿಗೆ

ಪಂಜಿಂ 6— ತೆಗೆದ ಹಾಕಲಾಗಿರುವ ನೌಕರರನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದೂ, ಹೆಚ್ಚು ಸಂಬಳ ಮತ್ತು ಶುಟ್ಟಿಭತ್ಯ ಕೊಡಬೇಕೆಂದೂ ಮಜಾನು ರೇವಿನ 500 ಮಂದಿಗೂ ಹೆಚ್ಚು ನೌಕರರು ಮೆರವಣಿಗೆ ನಡೆಸಿದರು.

ವಿಸರ್ಜನೆ

ಬೆಂಗಳೂರು 6— 10೦೦೦೦ ರೂ. ಪಾವತಿಯಾದ ಬಂಡವಾಳದ ಒಂದು ಸಾರ್ವಜನಿಕ ಕಂಪೆನಿ (ಶೃಂಗೇರಿ ಶ್ರೀ ಶಾರದಾ ಬ್ಯಾಂಕ್ ಲಿ) ವಿಸರ್ಜಿತವಾಯಿತು.

ಭಾರತೀಯರಿಗೆ ಪ್ರಧಾನತೆ

ಪಾಟ್ನಾ 6— ಕಷ್ಟಾದ ಅಕಾಶ ಯ್ಯಾನಗಳು ಹೆಚ್ಚಾದಾಗ ಅದಂಲ್ಲಿ ಹಾರಾಡಲು ಇತರ ರಾಷ್ಟ್ರೀಯರಿಂಕ ಭಾರತೀಯರಿಗೇ ಪ್ರಾಮುಖ್ಯತೆ ಕೊಡಲಾಗುವುದೆಂದು ರಷ್ಯಾದ ರಾಯಭಾರಿ ಬೆನಡಿಕ್ಟೊ ಹೇಳಿದರು.

★

ನವದೆಹಲಿ 6— ಆಲ್ ಇಂಡಿಯಾ ರೇಡಿಯೋದಲ್ಲಿ ಹಿಂದಿ ಬಗ್ಗೆ ಹೊಸ ನೀತಿಯನ್ನು ಪ್ರತಿಭಟಿಸಿ ಲೋಕಸಭಾ ಸದಸ್ಯ ಸ್ವಾಮಿ ರಾಮೇಶ್ವರಾನಂದರು ಇಷ್ಟರ್ಮೇಪನ್ನು ಮತ್ತು ಬ್ರಾಡಕಾಸ್ಟ್ಸ್ ಮಂತ್ರಿ ಶ್ರೀ ಗೋಪಾಲರೆಡ್ಡಿಯವರಿಗೆ ವೇಷದ ಹೊರಕ್ಕೆ (ಧರಣಿ) ಬೈಟಾ ಸತ್ಯಾಗ್ರಹ ನಡೆಸುತ್ತಿರುವರು

ಜೀನುಹನಿಗಳು

ಬುದ್ಧಿಯ ಬಲ

ಅದರೇ ಕಲಿಯುಗದಿ ಎಲ್ಲರಿಗು ।
ಒಂದೇ ತಲೆ, ಎಂಡು ಕೈಗಳು ।
ಇದ್ದರೇನಾಯ್ತು ? ಬುದ್ಧಿಯೋ ಸೂರಾರು, ಅಲ್ಲ-ಹಲವಾರು।
ಬಂದಿತ್ತು ಮೂರ್ಛೆ।
ಅಲ್ಲಿ- ಯು ಎಲ್ ಓ. ದಲ್ಲಿ
ಪ್ರಮುಖ ರಾಷ್ಟ್ರಗಳೆಲ್ಲ ಒಂದಾಗಿ
ಲೋಕಶಾಂತಿಯ ಕುರಿತು ನಡೆಸುವುದು
ಚರ್ಚೆ ।
ಇಲ್ಲಿ- ವಿಜ್ಞಾನಿಗಳು ಸೃಷ್ಟಿಸುವ
ಮಾಂಕಾಸ್ತ್ರಗಳ ನೋಡಿ ನೋಡಿ
ಶಾಂತಿದೇವತೆಗದೋ ಬಂದಿತ್ತು
ಮೂರ್ಛೆ ।

ವಿಧಿಯ ಮಾಟ

ಆಫೀಸಿನಲ್ಲಿ ಮೆನೆಜರಂ ಕಿಡಿನೋಟ
ಮನೆಯಲ್ಲಿ ಮಡದಿಯಾ ಮಕ್ಕಳಾ ಕಾಟ
ಹಾದಿಯಲಿ, ಬೀದಿಯಲಿ, ಸಾಲಗಾರರ
ಕಾಟ
ಒಡಗೂಡಿಸ್ತನ ಜಾಳು ಇದು, ವಿಧಿಯ
ಮಾಟ ।

ಅಲ್ಲ

ಜೈಲುಸೇರಿ ಬಂದವರೆಲ್ಲ
ದೇಶಭಕ್ತರಲ್ಲ
ಕಾಲೇಜು ಹೊಕ್ಕ ಹೊಂಟನರೆಲ್ಲ
ಬುದ್ಧಿವಂತರಲ್ಲ.

ಸ್ವಾತಂತ್ರ್ಯ

ಅಕ್ಕ ಸಾಲಿಗ ಮಾತ್ರ ಕಿವಿ ಚುಚ್ಚಬೇಕಂತೆ
ಅಕ್ಕ ಮಾತ್ರವೆ ಸೊಸೆಯು ಬಯ್ಯುತ್ತಿರಬೇಕಂತೆ
ಕತ್ತೆ ಮಾತ್ರವೆ ಗಂಟು ಮೂಟೆ ಹೊರಬೇಕಂತೆ
ಮತ್ತೆ ಉಳಿದೆಲ್ಲ ವರ್ಗಕು - ಅವಂವರ
ಸ್ವಾತಂತ್ರ್ಯಕ್ಕೆ ಬೇಕಂತೆ [ವಂ ಪ್ರ.]

ಮಾದಕ ವಸ್ತುಗಳ ಸೇವನೆ

ನವದೆಹಲಿ 5— ಮಾದಕ ವಸ್ತುಗಳ ಸೇವನೆಯು ಅಭ್ಯಾಸವಿದ್ದವರು ಅಫೀಮು ಪುಡಿ, ಟಿಂಕ್ಚರ್, ಓಪಿಯ್ಯ, ಮಾರ್ಫೈನ್ ಇಂಜಕ್ಷನ್, ಪೆಥಿಡೈನ್ ಇಂಜಕ್ಷನ್ ಇವೇ ಮೊದಲಾದ ಮಾದಕ ಔಷಧಿಗಳ ದುರುಪಯೋಗ ಮಾಡಿಕೊಂಡಿದ್ದಾರೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ಂ ಂ

ಒಪ್ಪಂದ

ನವದೆಹಲಿ 6— ಶಾಂತಿಯುತ ಉದ್ದೇಶಗಳಿಗಾಗಿ ಅಣುಶಕ್ತಿಯನ್ನು ಅಭಿವೃದ್ಧಿಗೊಳಿಸುವ ಸಂಬಂಧದಲ್ಲಿ ಭಾರತ ಸರಕಾರವು ಸಂಯುಕ್ತ ಅರಬ್ ಗಣರಾಜ್ಯದೊಂದಿಗೆ ಒಪ್ಪಂದ ಮಾಡಿಕೊಂಡಿದೆ

ಂ ಂ

ದಾದಿಯರ ವೃತ್ತಿ

ವೈದ್ಯಕೀಯ ವೃತ್ತಿಯು ಘನವಾದದ್ದು, ಅದರಲ್ಲೂ ದಾದಿಯರ (ನರ್ಸ್‌ಗಳ) ವೃತ್ತಿಯು ಘನಕರವಾದುದು : ಶಿಕ್ಷಣ ವೃತ್ತಿಯಂತೂ ಘನತಮವಾದುದು ಎಂದು ರಾಜ್ಯದ ಆರೋಗ್ಯ ಸಚಿವಂತಾದ ಡಾ॥ ನಾಗಪ್ಪ ಆಳ್ವರವರು ಕಳೆದ ಭಾನುವಾರ ಮಂಗಳೂರು ಸರ್ಕಾರಿ ಕಾಲೇಜಿನಲ್ಲಿ ಏರ್ಪಡಿಸಿದ್ದ ನರ್ಸಿಂಗು ಶಾಲಾ ದಿನೋತ್ಸವದ ಅಧ್ಯಕ್ಷತೆ ವಹಿಸಿ ಭಾಷಣ ಮಾಡುತ್ತಾ ತಿಳಿಸಿದರು.

ಸಾಹಿತಿ

ನೀನೆಷ್ಟೆ ಒರೆದರೂ, ಈಗ ಸಾಹಿತಿಯಲ್ಲ
ಸಶಕ್ತಾಗ ಮಾತ್ರ ಕಣ್ಣೀರು ಸುರಿಸುತ್ತ
ಸ್ಮಾರಕವ ರಚಿಸುವಂಲ್ಲ ! ಸತ್ಯ ಇದು,
ಸತ್ಯವಲ್ಲ !

SHAKTI SUDHA

A Superb Tonic

Edited, Printed & Published by the Proprietor, Dharma Prachara Nirata M. S. Krishna Rao at the Satyavadi Press, Chamarajapuram, Mysore. 4

ವುಡ್‌ಲ್ಯಾಂಡ್ಸ್ ಜನಭರಿತ 2 ನೇ ವಾರ

ನಯಿ ಮಾ (ಹಿಂದಿ) NAI MAA

ಪಾತ್ರ— ಬಾಲರಾಜ್ ಸಹಾನಿ, ಶ್ಯಾಮ, ಡೈಸಿ ಇರಾನಿ, ಪೀಪ್ ಕನಿವಾಲ್

ಸಕಲರೂ ನೋಡಿ ಆನಂದಿಸಬೇಕಾದ ಅಮೋಘ ಪಾರಿವಾರಿಕ ಚಿತ್ರ

ದಿನವಹಿ 3 ಪ್ರದರ್ಶನಗಳು

ಆಪೆರಾ— 6-9-62 ರಿಂದ

Flight to Assam ಫ್ಲೈಟ್ ಟು ಅಸ್ಸಾಂ

ನಟವರ್ಗ— ಧರ್ಮೇಂದ್ರ, ಶರ್ಮಿಳಾ, ಟ್ಯೂಟೂ, ಸುಜಾತಾ, ವಂದನಾ ಮುಂ

ಸಾಹಸಮಯ, ರೋಮಾಂಚಕ ಪ್ರಸಂಗಗಳ ಹಾರಾಟಗಳಿಂದ ಕೂಡಿದ ಚಿತ್ರ

ದಿನ 3 ಆಟಗಳು



ಅಮೋಘಕಾಕ್ಕೆ ಭೇಟಿ ಸಂಬಂಧದ ಚಿತ್ರಗಳು

Help The 'Gorakshana'

"ಗೋರಕ್ಷಣ ಕ್ಕಾಗಿ

ಗೋಕ್ಷೇಮ ವಾರ್ತಾಪತ್ರಿಕೆ, ಕಶುಪಿಡ್ಯ, ಪ್ರಾಣಿದಯಾದಿ ವಿಚಾರಗಳಿಂದ ಕೂಡಿದ
ಏಕೈಕ ಕನ್ನಡ ಪತ್ರಿಕೆ.